ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 09–08–2019

# ಪತ್ರಿಕಾ ಆಮಂತ್ರಣ

1. **ಭಾರತ ಗ್ರಂಥಾಲಯ ವಿಜ್ಞಾನ ಪಿತಾಮಹರಾದ ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್ ಇವರ 127ನೇ ಜನ್ಮದಿನಾಚರಣೆ:**
   **ಗ್ರಂಥಪಾಲಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ:**

   ಉದ್ಘಾಟನೆ:

   ಡಿ. ವಿ. ಸದಾನಂದಗೌಡ,
   ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತ ಸರ್ಕಾರ.

   ಪುಸ್ತಕ ಪ್ರದರ್ಶನ ಉದ್ಘಾಟನೆ:

   ಶ್ರೀಮತಿ ನಿರ್ಮಲಾ ಸೀತಾರಾಮನ್,
   ಕೇಂದ್ರ ಹಣಕಾಸು ಸಚಿವರು, ಭಾರತ ಸರ್ಕಾರ

   ಘನ ಉಪಸ್ಥಿತಿ:

   ಕೆ. ಪ್ರತಾಪಚಂದ್ರ ಶೆಟ್ಟಿ,
   ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್,

   ವಿಶ್ವೇಶ್ವರ ಹೆಗಡೆ ಕಾಗೇರಿ
   ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ.

   ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ:

   ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ,
   ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ
   ಅಧ್ಯಕ್ಷರು, ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರ.

**ಅಧ್ಯಕ್ಷತೆ:**

**ಎಂ. ಕೃಷ್ಣಪ್ಪ, ಶಾಸಕರು,**
**ವಿಜಯನಗರ ವಿಧಾನಸಭಾ ಕ್ಷೇತ್ರ.**

**ದಿನಾಂಕ: 12-08-2019, ಸೋಮವಾರ ಸಮಯ: ಬೆಳಿಗ್ಗೆ: 11-00 ಗಂಟೆಗೆ.**

**ಸ್ಥಳ: ಗ್ರಂಥಾಂಗಣ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು.**

## ಮಾಧ್ಯಮದವರ ಗಮನಕ್ಕೆ

**ಬೆಂ.ನಗರ.ಜಿಲ್ಲೆ, ಆಗಸ್ಟ್ 08: (ಕರ್ನಾಟಕ ವಾರ್ತೆ) :** ಆಗಸ್ಟ್ 15 ರಂದು ಮಾಣಿಕ್‌ಷಾ ಪರೇಡ್ ಮೈದಾನದಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಮಾಧ್ಯಮದವರು ಭಾಗವಹಿಸಲು ಅನುಕೂಲವಾಗುವಂತೆ 1 ಮಾಧ್ಯಮಕ್ಕೆ ಒಬ್ಬ ವರದಿಗಾರರು ಹಾಗೂ ಕ್ಯಾಮರಾಮಾನ್‌ಗೆ ಒಂದರಂತೆ ಪ್ರತಿ ಮಾಧ್ಯಮಕ್ಕೆ 2 ಪಾಸ್‌ಗಳನ್ನು ಆಗಸ್ಟ್ 13 ಮತ್ತು 14 ರಂದು ವಿತರಿಸಲಾಗುವುದು.

ಮಾಧ್ಯಮದವರು ಉಪ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಎರಡನೇ ಮಹಡಿ, ನಂ.17, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ) ಬೆಂಗಳೂರು-560 001 ಸಂಪರ್ಕಿಸಿ ಇಲಾಖೆಯಿಂದ ನೀಡಿರುವ ಮಾಧ್ಯಮ ಮಾನ್ಯತಾ ಕಾರ್ಡ್‌ನ ಒಂದು ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ನೀಡಿ ಪಾಸ್‌ನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು.

## ಪತ್ರಿಕಾ ಪ್ರಕಟಣೆ

## ಜನಾನುರಾಗಿ ಅರಸು ಛಾಯಾಚಿತ್ರ ಪ್ರದರ್ಶನ-ಪುಸ್ತಿಕೆ ಬಿಡುಗಡೆ

**ಬೆಂಗಳೂರು ಆಗಸ್ಟ್ 09: (ಕರ್ನಾಟಕ ವಾರ್ತೆ) :**

**ಜನಾನುರಾಗಿ ಅರಸು ಎಂದೇ ಗುರುತಿಸಲ್ಪಡುವ ಜಯಚಾಮರಾಜ ಒಡೆಯರ್ ಅವರ ಅತ್ಯಂತ ಅಪರೂಪದ ಚಿತ್ರಗಳ ಪ್ರದರ್ಶನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದು ಮೈಸೂರು ರಾಜಮನೆತನದ ಶ್ರೀಮತಿ ಪ್ರಮೋದಾ ದೇವಿ ಒಡೆಯರ್ ಅವರು ಇಂದು ಉದ್ಘಾಟಿಸಿದರು.

ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನದ ಆವರಣದಲ್ಲಿ ಆಯೋಜಿಸಿರುವ ಈ ಚಿತ್ರಪ್ರದರ್ಶನದೊಂದಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿರುವ "ಜನಾನುರಾಗಿ ಅರಸು" ಕಾಫಿ ಟೇಬಲ್ ಪುಸ್ತಕವನ್ನೂ ಬಿಡುಗಡೆ ಮಾಡಲಾಯಿತು. ಸಂಸದ ತೇಜಸ್ವಿ ಸೂರ್ಯ ಅವರು ಹಾಜರಿದ್ದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಪ್ರಮೋದಾ ದೇವಿ ಅವರು ಇದೊಂದು ಸಂಗ್ರಹ ಯೋಗ್ಯ ಸಂಚಿಕೆ ಆಗಿದ್ದು ಪುಸ್ತಕದಲ್ಲಿ ಸಾಕಷ್ಟು ಅಪರೂಪದ ಚಿತ್ರಗಳಿವೆ ಎಂದರು. ಜಯಚಾಮರಾಜ ಒಡೆಯರ್ ಅವರನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ವಾರ್ತಾ ಇಲಾಖೆ ಪ್ರಯತ್ನಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು. ಜಯಚಾಮರಾಜ ಒಡೆಯರ್ ಜನಸಾಮಾನ್ಯರ ಅರಸು ಎಂದು ಬಿಂಬಿಸುವ ಈ ಪುಸ್ತಿಕೆಯಲ್ಲಿರುವ ಮಾಹಿತಿ ಅಪರೂಪದ ಚಿತ್ರಗಳ ಪ್ರದರ್ಶನವನ್ನು ಅತ್ಯಂತ ಆಸಕ್ತಿಯಿಂದ ವೀಕ್ಷಿಸಿದ ಪ್ರಮೋದಾ ದೇವಿ ಅವರು ರಾಜಮಾತೆ ವಾಣಿ ವಿಲಾಸ ಅಮ್ಮಣ್ಣಿ ಅವರೊಂದಿಗೆ ಯುವರಾಜ ಜಯಚಾಮರಾಜ ಒಡೆಯರ್, ಮಹಾರಾಜರಾಗಿ ಪಟ್ಟವೇರಿದ ಸಂದರ್ಭ, ಸಹೋದರ ಸಹೋದರಿಯರೊಂದಿಗೆ ಜಯಚಾಮರಾಜ ಒಡೆಯರ್,ಮಹಾರಾಣಿ ಸತ್ಯಸತ್ಯಪ್ರೇಮ ಕುಮಾರಿಯವರೊಂದಿಗೆ ವಿವಾಹ, ದಸರಾ ಸಂದರ್ಭದಲ್ಲಿ ಯುವರಾಜರು, ಬಳಿಕ ರಾಜ್ಯಪಾಲರಾಗಿ ಜಯಚಾಮರಾಜ ಒಡೆಯರ್ ಅವರ ನೂರಕ್ಕೂ ಹೆಚ್ಚು ಚಿತ್ರಗಳನ್ನು ಅತ್ಯಂತ ಕುತೂಹಲಭರಿತರಾಗಿ ವೀಕ್ಷಿಸಿದರು. ವಿಧಾನಸಭೆ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರಾಗಿ ಜಯಚಾಮರಾಜ ಒಡೆಯರ್ ಅವರ ಚಿತ್ರಗಳು, ವಿಧಾನಸೌಧ ನಿರ್ಮಾಣಕ್ಕೂ ಮುನ್ನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದ ಜಂಟಿ ಅಧಿವೇಶನಕ್ಕೆ ಆಗಮಿಸುತ್ತಿರುವುದು, ಜಂಟಿ ಅಧಿವೇಶನ ಉದ್ದೇಶಿಸಿ ಪುರಭವನದಲ್ಲಿ ಮಾತನಾಡುತ್ತಿರುವುದು, ಪ್ರಧಾನಿ ಜವಾಹರಲಾಲ್ ನೆಹರೂ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸುತ್ತಿರುವುದು, ಸೋವಿಯತ್ ಅಧ್ಯಕ್ಷ ನಿಖಿತಾ ಕ್ರುಶ್ಚೇವ್, ವಿಯೆಟ್ನಾಂ ಅಧ್ಯಕ್ಷ ಹೋಚಿಮಿನ್ ಅವರೊಂದಿಗೆ, ಕರ್ನಾಟಕದ ಐತಿಹಾಸಿಕ ಏಕೀಕರಣ ಸಮಾರಂಭ, ಕೆಂಗಲ್,  ಸೇರಿದಂತೆ ರಾಜ್ಯಪಾಲರಾಗಿ ಗಣ್ಯರೊಂದಿಗೆ ಇರುವ ಚಿತ್ರಗಳನ್ನು ನೋಡಿ ಅಪರೂಪದ ಚಿತ್ರಗಳ ಸಂಗ್ರಹದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ನಿರ್ದೇಶಕರು ಮತ್ತು ಮುಖ್ಯಮಂತ್ರಿಯವರ ಮಾಧ್ಯಮ ಕಾರ್ಯದರ್ಶಿ ಎನ್. ಭೃಂಗೀಶ್, ತೋಟಗಾರಿಕಾ ಇಲಾಖೆ ನಿರ್ದೇಶಕ ಡಾ. ಎಂ. ವಿ.ವೆಂಕಟೇಶ್,  ಜಂಟಿ ನಿರ್ದೇಶಕ ಬಸವರಾಜ ಕಂಬಿ ಮತ್ತಿತರರು ಹಾಜರಿದ್ದರು.

ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

ಬೆಂಗಳೂರು ಆಗಸ್ಟ್ 09: (ಕರ್ನಾಟಕ ವಾರ್ತೆ) :

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 11–08–2019 ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

<u>I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ</u>

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಕು. ಜನನ್ಯ ಅಶೋಕ್ ಕುಮಾರ್ ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

- ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಬಾಲಭವನ ಸೊಸೈಟಿ ಸಹಯೋಗದೊಂದಿಗೆ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯಡಿ ಚಿ. ಶಶಾಂಕ್ ಕಿರಣ್ ನಾಯರ್ ರವರಿಂದ ಭರತನಾಟ್ಯ ಹಾಗೂ ಕು. ಅನ್ವಿತ ರವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# RARE PICTURES OF JAYACHAMARAJA IN LALBAGH PHOTO EXHIBITION: COFFEE TABLE BOOL ON ODEYAR RELEASED

**Bengaluru Aug 9 (Karnataka Information)**

**Its double bonanza for Flower shows visitors at Lalbagh Bengaluru this year. The Photo Exhibition organised by the Department of Information and Public Relations has the rare photos of erstwhile Maharaja of Mysore, Jayachamaraja Wadiyar. The visitors to the Exhibition can also carry a free coffee table book "Jananuragi Arasu" published by the department.**

**The Exhibition was inaugurated and the Coffee Table book was released by Pramoda Devi the Chairperson of Sri Srikantadatta Narasimharaja Wadiyar Trust along with MP Tejaswi Surya.**

**The Exhibition and the Coffee table book has the rarest collection of pictures of the erstwhile dynasty of Mysore right from his childhood to ascending the throne as Maharaja and as Governor of the newly formed state of Karnataka.**

**Pramodadevi Wodeyar expressed her happiness about the collections and the attempt of the department to introduce the erstwhile Mysore Dynasty and First Governor of Karnataka through pictures and book.**

**N. Bhrungeesh, Director DIPR and Press Secretary to CM, Dr. M. V. Venkatesh, Director Horticulture Department and Basavaraj Kambi Joint Director DIPR was present on the occasion.**

## ಪ್ರಾಥಮಿಕ ಶಾಲಾ ಶಿಕ್ಷಕರ ಗಣಕೀಕೃತ  ಕೌನ್ಸಿಲಿಂಗ್ ವರ್ಗಾವಣೆ

**ಬೆಂಗಳೂರು ಆಗಸ್ಟ್ 09: (ಕರ್ನಾಟಕ ವಾರ್ತೆ) :**

**2018–19 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು  28–7–2019 ರಂದು ಅಂತಿಮ ಆದ್ಯತಾ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಈ ಪಟ್ಟಿಯಲ್ಲಿರುವ ಶಿಕ್ಷಕರುಗಳಿಗೆ ಈ ಕೆಳಕಂಡ ದಿನಾಂಕಗಳಂದು ಬಿ.ಆರ್.ಸಿ. ಕೇಂದ್ರ ಬೆಂಗಳೂರು ದಕ್ಷಿಣ ವಲಯ–01 ಟಿನ್ ಶಾಲೆ ಆವರಣ ಬಸವನಗುಡಿ ಬೆಂಗಳೂರು ಇಲ್ಲಿ ಕೌನ್ಸಿಲಿಂಗ್  ನಡೆಸಲಾಗುವುದು.  ಸದರಿ ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರು ಕಡ್ಡಾಯವಾಗಿ ನಿಗಧಿತ ದಿನಾಂಕ ಮತ್ತು ಸಮಯದಂದು ತಪ್ಪದೇ ಹಾಜರಾಗಬಹುದಾಗಿದೆ.  ಗೈರು ಹಾಜರಾಗುವ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್‌ನಲ್ಲಿ ಸ್ಥಳನಿಯುಕ್ತಿಗೊಳಿಸಲಾಗುವುದು.**

**ಆಗಸ್ಟ್ 13 ರಂದು ಮುಖ್ಯ ಶಿಕ್ಷಕರು ಕಡ್ಡಾಯ ವರ್ಗಾವಣೆ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆ 1 ರಿಂದ 15, ಸಮಯ ಬೆಳಿಗ್ಗೆ 10.00 ಗಂಟೆಯಿಂದ,  ಆಗಸ್ಟ್ 13 ರಂದು ದೈಹಿಕ ಶಿಕ್ಷಕರು  1 ರಿಂದ 8,  ಬೆಳಿಗ್ಗೆ 10.30 ಗಂಟೆಯಿಂದ, ಆಗಸ್ಟ್ 13 ರಂದು ಸಹ ಶಿಕ್ಷಕರು  ಜೇಷ್ಠತಾಪಟ್ಟಿ  1 ರಿಂದ 75, ಬೆಳಿಗ್ಗೆ 11.00 ಗಂಟೆಯಿಂದ, ಆಗಸ್ಟ್  14 ರಂದು ಘಟಕದೊಳಗೆ ಪರಸ್ಪರ ವರ್ಗಾವಣೆ ಶಿಕ್ಷಕರು ಜೇಷ್ಠತಾ ಪಟ್ಟಿ ಕ್ರಮಸಂಖ್ಯೆ 4  ಬೆಳಿಗ್ಗೆ 10.00 ಗಂಟೆಯಿಂದ  ಹಾಗೂ ಆಗಸ್ಟ್ 14 ರಂದು ಸಹ ಶಿಕ್ಷಕರು ಜೇಷ್ಠತಾ ಪಟ್ಟಿ ಕ್ರಮಸಂಖ್ಯೆ  75 ರಿಂದ 159 ಎಂದು  ಉಪ ನಿರ್ದೇಶಕರು (ಆಡಳಿತ), ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**